**ಕರ್ನಾಟಕ ಮಾಹಿತಿ ಆಯೋಗದಲ್ಲಿ ದಿ: 11-09-2018 ರಂದು ಮಧ್ಯಾಹ್ನ 12:30 ಗಂಟೆಗೆ ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರವರ ಅಧ್ಯಕ್ಷತೆಯಲ್ಲಿ ಎನ್‌ಐಸಿ ಸಂಸ್ಥೆಯೊಂದಿಗೆ ನಡೆದ ಸಭೆಯ ನಡವಳಿಗಳು**

ಸಭೆಯಲ್ಲಿ ಹಾಜರಿದ್ದವರು:-

1. ಶ್ರೀ ಎಲ್. ಕೃಷ್ಣಮೂರ್ತಿ, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು.
2. ಶ್ರೀ ಲಕ್ಷ್ಮೀಶ, ತಾಂತ್ರಿಕ ನಿರ್ದೇಶಕರು, ಎನ್‌ಐಸಿ ಸಂಸ್ಥೆ.
3. ಶ್ರೀಮತಿ ಸಂಗೀತ ಮಂಜುನಾಥ, ತಾಂತ್ರಿಕ ನಿರ್ದೇಶಕರು, ಎನ್‌ಐಸಿ ಸಂಸ್ಥೆ.
4. ಶ್ರೀ ದಿಲೀಪ್ ಕುಮಾರ್ ಹೆಚ್.ಬಿ. ಲೆಕ್ಕಾಧೀಕ್ಷಕರು.

ಸಭೆಯಲ್ಲಿ ಚರ್ಚಿಸಲಾದ ವಿಷಯ

1. ಕರ್ನಾಟಕ ಮಾಹಿತಿ ಆಯೋಗಕ್ಕೆ ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಸುವ ಸಂಬಂಧ ಹೊಸ ತಂತ್ರಾಂಶವನ್ನು ಅಳವಡಿಸುವ ಕುರಿತು.

ಈಗಾಗಲೇ ಕೇಂದ್ರ ಮಾಹಿತಿ ಆಯೋಗದಲ್ಲಿ Online ಮುಖಾಂತರ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದ್ದು, ಈ ವ್ಯವಸ್ಥೆಯನ್ನು ಕರ್ನಾಟಕ ಮಾಹಿತಿ ಆಯೋಗದಲ್ಲಿಯು ಜಾರಿಗೆ ತರುವ ಕುರಿತು ಎನ್‌ಐಸಿ ಸಂಸ್ಥೆಯ ತಾಂತ್ರಿಕ ನಿರ್ದೇಶಕರಾದ ಶ್ರೀ ಲಕ್ಷ್ಮೀಶರವರು ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರಿಗೆ Online RTI Web site ಮಾದರಿಯ ಮುಖಾಂತರ ಮಾಹಿತಿ ನೀಡಿದರು.

ಮಾಹಿತಿ ಆಯೋಗದಲ್ಲಿ ಒಬ್ಬರು ನೂಡಲ್ ಆಫೀಸರ್‌ನ್ನು ನೇಮಿಸುವುದರ ಮುಖಾಂತರ ಅರ್ಜಿದಾರರು ತಾವು ಆಯೋಗಕ್ಕೆ ಸಲ್ಲಿಸುವ ಅರ್ಜಿಗಳನ್ನು 1) Citizen Part 2) Department Part ಎಂದು ಎರಡು ವಿಧದಲ್ಲಿ ಸಲ್ಲಿಸಬಹುದಾಗಿದ್ದು, Citizen Partನಲ್ಲಿ ಅರ್ಜಿದಾರರು ಒಮ್ಮೆ ತಮ್ಮ ಅರ್ಜಿಯನ್ನು Online RTI Request Form ನಲ್ಲಿ ತಮ್ಮ ವಿವರವನ್ನು ನಮೂದಿಸಿ ಕಾಯ್ದೆಯಲ್ಲಿ ತಿಳಿಸಿರುವಂತೆ ಅರ್ಜಿ ಶುಲ್ಕವನ್ನು ಆನ್‌ಲೈನ್ ಮುಖಾಂತರ ಪಾವತಿಸಬಹುದಾಗಿದ್ದು, ತದನಂತರ ಅರ್ಜಿಯನ್ನು ಇಲಾಖಾ ನೂಡಲ್ ಆಫೀಸರ್ ಪರಿಶೀಲಿಸಿ, ಅರ್ಜಿಗೆ ಸಂಬಂಧಿಸಿದ ಮಾಹಿತಿಯನ್ನು ಆನ್‌ಲೈನ್ ಮುಖಾಂತರ ಅರ್ಜಿದಾರರಿಗೆ ಸಲ್ಲಿಸುವ ವ್ಯವಸ್ಥೆಯನ್ನು ಸಹ ಕಲ್ಪಿಸಲಾಗಿರುತ್ತದೆ. ನೂಡಲ್ ಅಧಿಕಾರಿಯು ನೀಡಿರುವ ಮಾಹಿತಿಯು ಅಪೂರ್ಣವಾಗಿದ್ದಲ್ಲಿ ಅರ್ಜಿದಾರರು ಆನ್‌ಲೈನ್ ಮುಖಾಂತರವೇ ಮೇಲ್ಮನವಿ ಪ್ರಾಧಿಕಾರಿಗಳಿಗೆ ಮೇಲ್ಮನವಿಯನ್ನು ಸಲ್ಲಿಸಲು ಸಹ ಅವಕಾಶವಿರುತ್ತದೆ. ಮುಂದುವರೆಯುತ್ತಾ, ಆಯೋಗಕ್ಕೆ ಕಾಯ್ದೆ ಕಲಂ 19(3)ರಂತೆ ಎರಡನೇ ಮೇಲ್ಮನವಿಯನ್ನು ಸಹ ಸಲ್ಲಿಸಬಹುದಾಗಿರುತ್ತದೆ ಎಂದು ಈ ತಂತ್ರಾಂಶದ ಮಾಡ್ಯೂಲ್‌ನ್ನು ಸಭೆಯಲ್ಲಿ ಎನ್‌ಐಸಿ ಸಂಸ್ಥೆಯ ತಾಂತ್ರಿಕ ನಿರ್ದೇಶಕರಾದ ಶ್ರೀ ಲಕ್ಷ್ಮೀಶರವರು ಮಾನ್ಯ ಮುಖ್ಯ ಮಾಹಿತಿ ಆಯುಕ್ತರಿಗೆ ವಿವರಿಸಿದರು.

2) ಮಾಹಿತಿ ಆಯೋಗದಲ್ಲಿ ಹೊಸದಾಗಿ RTI ಅರ್ಜಿಗಳನ್ನು Online ನಲ್ಲಿ ಸ್ವೀಕರಿಸಲು ಹೊಸ ತಂತ್ರಾಂಶವನ್ನು ಅಳವಡಿಸಲು ಕ್ರಮ ಕೈಗೊಳ್ಳುವಂತೆ ಕೋರಿ ಎನ್‌ಐಸಿ ಸಂಸ್ಥೆಯವರಿಗೆ ಪತ್ರವನ್ನು ಬರೆಯುವಂತೆ ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಸೂಚಿಸಿದರು.

14/9/2018

ಕ್ರಮ: ಕಾರ್ಯದರ್ಶಿ

3) ಆನ್‌ಲೈನ್ ಮುಖಾಂತರ ಆರ್‌ಟಿಐ ಅರ್ಜಿ/ಮಾಹಿತಿ ಶುಲ್ಕಗಳನ್ನು ಪಾವತಿಸುವ ಕುರಿತು ಕಾರ್ಯದರ್ಶಿಗಳು, ರಾಜ್ಯ ಹುಜೂರು ಖಜಾನೆರವರಿಗೆ ಹೊಸ ತಂತ್ರಾಂಶದ ಜೊತೆ ಸಂಪರ್ಕಗೊಳಿಸಲು ತಾಂತ್ರಿಕ ಬೆಂಬಲ ನೀಡುವಂತೆ ಕೋರಿ ಖಜಾನೆ-02 ಇಲಾಖೆಗೆ ಪತ್ರ ಬರೆಯಲು ಸೂಚಿಸಲಾಯಿತು.

ಕ್ರಮ: ಲೆಕ್ಕಾಧೀಕ್ಷಕರು

4) ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸುವ ಹೊಸ ತಂತ್ರಾಂಶವನ್ನು ಅಳವಡಿಸಲು ತಗಲುವ ಖರ್ಚು-ವೆಚ್ಚಗಳ ಕುರಿತು ಚರ್ಚಿಸಲಾಯಿತು ಎನ್‌ಐಸಿ ಸಂಸ್ಥೆಯವರು ಇ-ಆಡಳಿತದ ವತಿಯಿಂದ ಪಡೆದುಕೊಳ್ಳುವುದಾಗಿ ಶ್ರೀ ಲಕ್ಷ್ಮೀಶರವರು ಸಭೆಯಲ್ಲಿ ತಿಳಿಸಿದರು.

5) ಈ ಸಂಬಂಧ ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಸದರಿ ತಂತ್ರಾಂಶವನ್ನು ಯಾವ ದಿನಾಂಕದಂದು ಬಿಡುಗಡೆ ಮಾಡಬಹುದೆಂದು ಕೋರಲಾಗಿ, ಎನ್‌ಐಸಿ ಸಂಸ್ಥೆಯವರು ಅಕ್ಟೋಬರ್ ಮಾಹೆಯ ಮೊದಲನೇ ವಾರದಲ್ಲಿ ಬಿಡುಗಡೆ ಮಾಡುವುದಾಗಿ ಸಭೆಯಲ್ಲಿ ಭರವಸೆ ನೀಡಿರುತ್ತಾರೆ.

6) ಪ್ರಸ್ತುತ ಚಾಲ್ತಿಯಲ್ಲಿರುವ ತಂತ್ರಾಂಶವನ್ನು ಪುನರ್ ರಚಿಸಿ ಕೇಂದ್ರ ಮಾಹಿತಿ ಆಯೋಗದ Website ಮಾದರಿಯಲ್ಲಿ ಹೊಸ ತಂತ್ರಾಂಶವನ್ನು ಕಾಲಕಾಲಕ್ಕೆ ಅಳವಡಿಸಲು ಆಯೋಗದಲ್ಲಿ ಹೊಸದಾಗಿ Website Committeeಯನ್ನು ರಚಿಸಬೇಕಾಗಿ ಎನ್‌ಐಸಿ ಸಂಸ್ಥೆಯ ತಾಂತ್ರಿಕ ನಿರ್ದೇಶಕರಾದ ಶ್ರೀ ಲಕ್ಷ್ಮೀಶರವರು ಮಾನ್ಯ ಮುಖ್ಯ ಮಾಹಿತಿ ಆಯುಕ್ತರನ್ನು ಕೋರಿದ್ದು, ಅದರಂತೆ Website Committeeಯ ರಚನೆಗೆ ಕಾರ್ಯದರ್ಶಿಯವರನ್ನು ಸಮಿತಿಯ ಅಧ್ಯಕ್ಷರು, ಎನ್‌ಐಸಿರವರನ್ನು ಸದಸ್ಯರನ್ನಾಗಿ ನೇಮಕ ಮಾಡಲಾಗುವುದೆಂದು ಮಾನ್ಯರು ಸಭೆಯಲ್ಲಿ ತಿಳಿಸಿದರು.

ಕ್ರಮ: ಕಾರ್ಯದರ್ಶಿ

7) ಮಾಹಿತಿ ಆಯೋಗದ Mobile Appನ್ನು ಉನ್ನತೀಕರಿಸುವ ಬಗ್ಗೆ ಎನ್‌ಐಸಿ ಸಂಸ್ಥೆಯೊಂದಿಗೆ ಚರ್ಚಿಸಲಾಯಿತು. ಎನ್‌ಐಸಿರವರು Android ನಿರ್ವಹಿಸುವವರನ್ನು ಕೋರಲು ಸಲಹೆ ನೀಡಿರುತ್ತಾರೆ.

ಕ್ರಮ: ಕಾರ್ಯದರ್ಶಿ

ಮೇಲ್ಕಂಡ ಅಂಶಗಳನ್ನು ಚರ್ಚಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

11/9/2018

ರಾಜ್ಯ ಮುಖ್ಯ ಮಾಹಿತಿ ಆಯುಕ್ತರು